

# ಧನ್ಯತೆಯ ಸಾಕಾರ

ಪೂಜ್ಯ ಸ್ವಾಮಿ ಸೋಮನಾಥಾನಂದಜಿ ಮಹಾರಾಜ್ ಅವರು ಬಹಳ ವರ್ಷಗಳ ಕಾಲ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿದ್ದರು. ಇವರು ರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ಕನ್ನಡ ಭಾಷೆಯಲ್ಲಿ ವಿಪುಲವಾಗಿ ಬರೆದು ಪರಿಚಯಿಸಿದ ಮಹನೀಯರು. ಅವರು ಹುಟ್ಟಿದ್ದು ೧೯೧೨ರಲ್ಲಿ. ತಂದೆ ಹೆಚ್. ಎಸ್. ವಿಜಯರಾವ್, ತಾಯಿ ಲಕ್ಷ್ಮೀದೇವಿ. ಮೈಸೂರು ಹತ್ತಿರದ ಹುಲಿಯೂರುದುರ್ಗ ಎಂಬ ಹಳ್ಳಿಯಲ್ಲಿ ಎಲ್.ಎಸ್. ವರೆಗೆ ಓದಿ, ಅನಂತರ ಮೈಸೂರಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಇಂಟರ್‌ಮೀಡಿಯೇಟ್ ಓದುತ್ತಿರುವಾಗಲೇ ಆಶ್ರಮದ ಸಂಪರ್ಕದಿಂದಾಗಿ, ತೀವ್ರ ವೈರಾಗ್ಯ ಅವರಲ್ಲಿ ಉಂಟಾಯಿತು. ೧೯೩೭ರಲ್ಲಿ ಮನೆ ಬಿಟ್ಟು ಹೊರಟುಹೋದರು. ಅವರು ಬರೆದಿಟ್ಟು ಹೋದ ಪತ್ರದಲ್ಲಿ ಹೀಗಿತ್ತು: "ಸತ್ಯಸಾಧನೆಗಾಗಿ ಪ್ರಯಾಣ ಮಾಡುತ್ತಿದ್ದೇನೆ. ಹುಡುಕುವ ಪ್ರಯತ್ನ ಮಾಡಬೇಡಿ" ಅನಂತರ ಮದರಾಸ್‌ನ ಶ್ರೀರಾಮಕೃಷ್ಣ ಮಠ ಸೇರಿದರೆಂದು ತಿಳಿದುಬಂತು.

ಪೂಜ್ಯ ಸ್ವಾಮೀಜಿಯವರ ವ್ಯಕ್ತಿತ್ವ ಮತ್ತು ಸಾಧನೆಯನ್ನು ಪ್ರತಿಬಿಂಬಿಸುವ ಎರಡು ನೆನಪುಗಳನ್ನು ಇಲ್ಲಿ ಕೊಡಲಾಗಿದೆ. ಮೊದಲ ನೆನಪನ್ನು ಬರೆದ ಸ್ವಾಮಿ ಅಮೂರ್ತಾನಂದರು ತಮಿಳುನಾಡಿನ ಮಲ್ಲಿಯಂಕರಣೈಯಲ್ಲಿರುವ ರಾಮಕೃಷ್ಣ ಮಿಷನ್ ಕೇಂದ್ರದ ಮುಖ್ಯಸ್ಥರಾಗಿದ್ದಾರೆ. ಎರಡನೆಯ ನೆನಪನ್ನು ಬರೆದಿರುವ ಸ್ವಾಮಿ ಪುಣ್ಯವ್ರತಾನಂದರು ಬೆಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಎರಡೂ ಸ್ಮರಣಿಕೆಗಳನ್ನು ೨೦೦೦ನೇ ಇಸವಿಯಲ್ಲಿ, ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಮೃತಮಹೋತ್ಸವದ ಸಂದರ್ಭದಲ್ಲಿ ಹೊರತರಲಾದ 'ಅಮೃತವರ್ಷ' ಎಂಬ ಸ್ಮರಣಸಂಚಿಕೆಯಿಂದ ಆರಿಸಿಕೊಳ್ಳಲಾಗಿದೆ.

**ಪೂ**ಜನೀಯ ಸೋಮನಾಥಾನಂದಜೀಯವರ ಪರಿಚಯ ನನಗೆ ೧೯೬೮ರಿಂದಲೂ ಇತ್ತು. ನಾನು ವಿದ್ಯಾರ್ಥಿಯಾಗಿದ್ದಾಗಲೇ ಸ್ವಾಮೀಜಿಯವರ ಪ್ರವಚನ ಕೇಳಲು ಮೈಸೂರಿನ ಆಶ್ರಮಕ್ಕೆ ಹೋಗುತ್ತಿದ್ದೆ. ಅವರು 'ಪ್ರವಚನ ಸಪ್ತಾಹ' ಮಾಡುತ್ತಿದ್ದರು. ಒಂದೇ ವಿಷಯದ ಮೇಲೆ ಏಳು ದಿವಸಗಳ ಕಾಲ ಉಪನ್ಯಾಸಗಳನ್ನು ಮಾಡುತ್ತಿದ್ದರು. ಶ್ರೀರಾಮಕೃಷ್ಣರು, ವಿವೇಕಾನಂದರು, ಶಾರದಾದೇವಿ, ಲಲಿತಾಸಹಸ್ರನಾಮ, ಭಗವದ್ಗೀತೆ, ಉಪನಿಷತ್ತು, ನಾರದಭಕ್ತಿಸೂತ್ರ ಮುಂತಾದವುಗಳ ಮೇಲೆ ಪ್ರವಚನ ಮಾಡುತ್ತಿದ್ದರು. ಅವರ ಧ್ವನಿ ಇಂಪಾಗಿತ್ತು, ಆಳವಾಗಿತ್ತು. ಧಾಟಿ ಕೂಡ ಅವಸರವಿಲ್ಲದೆ ವಿಳಂಬವಿಲ್ಲದೆ ಒಂದೇ ಸಮನಾಗಿರುತ್ತಿತ್ತು. ಭಾಷೆ ನಿರರ್ಗಳ. ಹೇಳುತ್ತಿದ್ದ ವಿಷಯದಲ್ಲಿ ಅವರ ಮನಸ್ಸು ತಲ್ಲೀನವಾಗಿರುತ್ತಿತ್ತು. **'ಶ್ರೀರಾಮಕೃಷ್ಣರು'** ಎಂದು ಅವರು ತಮ್ಮ ಗಂಭೀರ ಧ್ವನಿಯಲ್ಲಿ ಉಚ್ಚರಿಸಿದರೆ ಅದೊಂದು ಮಂತ್ರದಂತಿರುತ್ತಿತ್ತು. ಪ್ರವಚನ ಪ್ರಾರಂಭವಾಗುತ್ತಿದ್ದಂತೆ ಕೇಳುತ್ತಿದ್ದವರ ಮನಸ್ಸು ಅದರಲ್ಲಿ ತೊಡಗುತ್ತಿತ್ತು. ಸ್ವಾಮೀಜಿಯವರು ವಿವರಿಸುತ್ತಿದ್ದ ಭಾವನೆಗಳು ಕೇಳುವವರಲ್ಲಿ ನಾಟುತ್ತಿದ್ದವು. ಪ್ರವಚನದ ಮುಕ್ತಾಯ ತಿಳಿಯುತ್ತಿದ್ದುದು ಅವರು ನಿಲ್ಲಿಸಿ, **'ಓಂ ಪೂರ್ಣಮದಃ'** ಎಂದು ಹೇಳಿದಾಗಲೇ.

ನಾನು ಸ್ವಾಮೀಜಿಯವರ ಅನೇಕ ಪ್ರವಚನಗಳನ್ನು ಕೇಳಿದ್ದೇನೆ. ಅವರ ಹಲವಾರು ಉಪನ್ಯಾಸಗಳನ್ನು ರೆಕಾರ್ಡ್ ಮಾಡಿದ್ದೇನೆ. ಅನೇಕ ಇತರ ಪ್ರಸಿದ್ಧ ಭಾಷಣಕಾರರ ಉಪನ್ಯಾಸಗಳನ್ನೂ ಕೇಳಿದ್ದೇನೆ. ಶ್ರೀರಾಮಕೃಷ್ಣ, ವಿವೇಕಾನಂದ, ಶಾರದಾದೇವಿ – ಈ ದಿವ್ಯತ್ರಯರ ಜೀವನವನ್ನು ಕುರಿತು, ಸ್ವಾಮೀಜಿಯವರಂತೆ, ಅವರಷ್ಟು ಸಲ ಬೇರೆಯವರು ಮಾತನಾಡಿರುವುದು ನನಗೆ ತಿಳಿದಿಲ್ಲ. ಅದು ಸೋಮನಾಥಾನಂದಜೀಯವರ ವಿಶೇಷ ಕೊಡುಗೆ. ಮೂವರ ಜಯಂತಿಯಲ್ಲೂ ಅವರು ಮಾತನಾಡುತ್ತಿದ್ದರು. ಪ್ರತಿಬಾರಿಯೂ ಅದಕ್ಕೊಂದು ನವೀನತೆ ಮತ್ತು ಶಕ್ತಿ ಇರುತ್ತಿತ್ತು.

ಸ್ವಾಮೀಜಿಯವರು ಶ್ರೇಷ್ಠ ಬರಹಗಾರರು. ಅಲ್ಪಕಾಲದಲ್ಲಿ ಅಪಾರ ಸಾಹಿತ್ಯವನ್ನು ಸೃಷ್ಟಿಸಿದರು. ಬರವಣಿಗೆಯಾಗಲಿ, ಪ್ರವಚನವಾಗಲಿ ಅವರಿಗೆ ಅದೊಂದು ತಪಸ್ಸು. ಅವರ ಕಾಲದಲ್ಲಿ ಇದ್ದ ಪ್ರಸಿದ್ಧ ಲೇಖಕರು ಅವರ ಬರವಣಿಗೆಯನ್ನು ಶ್ಲಾಘಿಸಿ, ಪೂಜ್ಯದೃಷ್ಟಿಯಿಂದ ನೋಡುತ್ತಿದ್ದರು. ಸ್ವಾಮಿ ವಿವೇಕಾನಂದರ ಕೃತಿಗಳನ್ನು ಕನ್ನಡಕ್ಕೆ ಅನುವಾದ ಮಾಡಲು ಸ್ವಾಮೀಜಿ ಶ್ರೀ ಕುವೆಂಪು ಅವರನ್ನು ಕೇಳಿಕೊಂಡರಂತೆ. ಅವರು, "ಸ್ವಾಮೀಜಿ, ಈ ಮಹತ್‌ಕಾರ್ಯ ನಿಮ್ಮಿಂದಲೇ ಆಗಬೇಕು. ಬೇಕಾದರೆ ಇದಕ್ಕೆ

ಮುನ್ನುಡಿ ಬರೆದುಕೊಡುತ್ತೇನೆ" ಎಂದರಂತೆ. ಅದರಂತೆ ಅವರು ನಂತರ ಸುಂದರವಾದ ಮುನ್ನುಡಿಯನ್ನು ಬರೆದುಕೊಟ್ಟರು. ಒಮ್ಮೆ ನಾನು ಹೇಳಿದೆ, "ಸ್ವಾಮೀಜಿ, ನೀವು ಎಷ್ಟೊಂದು ಪುಸ್ತಕಗಳನ್ನು ಬರೆದು ಶ್ರೀರಾಮಕೃಷ್ಣರಿಗೆ ಸೇವೆ ಸಲ್ಲಿಸಿದ್ದೀರಿ!" ಅವರು ಕೂಡಲೆ, "ಇದನ್ನೆಲ್ಲ ನಾನೇ ಬರೆದೆನೇ ಎಂದು ನನಗೇ ಆಶ್ಚರ್ಯವಾಗುತ್ತದೆ. ಕುಮಾರವ್ಯಾಸ ಹೇಳಿದಂತೆ ಕವಿ ನಾರಾಯಣ, ಲಿಪಿಕಾರ ಕುಮಾರವ್ಯಾಸ. ಎಲ್ಲವನ್ನೂ ಗುರು ಮಹಾರಾಜರೇ ಬರೆಸಿದ್ದು. ಯಾರೂ ತಾವೇ ಬರೆದೆವೆಂದು ಭಾವಿಸಬಾರದು" ಎಂದರು.

ಸ್ವಾಮೀಜಿಯವರಲ್ಲಿ ನಾವು ನೋಡಿದ ಮುಖ್ಯ ಗುಣಗಳೆಂದರೆ ಶಿಸ್ತು, ನಿಷ್ಠೆ ಮತ್ತು ಸರಳತೆ. ಅಲ್ಪಕಾಲದಲ್ಲೇ ಹೆಚ್ಚು ಕೆಲಸವನ್ನು ಸಾಂಗವಾಗಿ ಮಾಡಿ ಮುಗಿಸಲು ಬೇಕಾದ ಶಿಸ್ತು ಮತ್ತು ಅಚ್ಚುಕಟ್ಟು ಅವರ ಜೀವನದಲ್ಲಿ ಇತ್ತು. ಧ್ಯಾನ, ಜಪ, ಅಧ್ಯಯನ, ಬರವಣಿಗೆ, ವ್ಯವಹಾರ, ವಿದ್ಯಾಶಾಲೆ ಮತ್ತು ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಗೆ ಭೇಟಿ, ಭಕ್ತರೊಡನೆ ಮಾತುಕತೆ ಮತ್ತು ಅವರಿಗೆ ಪ್ರಿಯವಾದ ವಾಕಿಂಗ್ ಮತ್ತು ಸಂಗೀತವನ್ನು ಕೇಳುವುದು – ಇವೆಲ್ಲಾ ಅವರ ದಿನಚರಿಯಲ್ಲಿ ಅಡಕವಾಗಿದ್ದುವು. ಇವುಗಳಲ್ಲಿ ಯಾವುದನ್ನೂ ಬಿಡುತ್ತಿರಲಿಲ್ಲ. ಎಲ್ಲಕ್ಕೂ ಒಂದು ಸಮಯವಿತ್ತು. ಪ್ರತಿಯೊಂದನ್ನೂ ಅದೇ ಹೊತ್ತಿಗೆ, ಅಷ್ಟೇ ಸಮಯದಲ್ಲಿ ಮಾಡಿ ಮುಗಿಸುತ್ತಿದ್ದರು. ಅವರು ಮಾಡುತ್ತಿದ್ದ ಕೆಲಸದಿಂದ ಸಮಯ ಎಷ್ಟೆಂದು ತಿಳಿಯಬಹುದಾಗಿತ್ತು.

ನಿರಂತರ ಜಪ, ಧ್ಯಾನ, ಚಿಂತನೆ, ಉಪಾಸನೆ ಇವುಗಳಿಂದ ಸ್ವಾಮೀಜಿಯವರು ಶ್ರೀರಾಮಕೃಷ್ಣ, ವಿವೇಕಾನಂದ ಮತ್ತು ಶಾರದಾದೇವಿಯವರಲ್ಲಿ ನಿಷ್ಠೆ ಮತ್ತು ಭಕ್ತಿಯನ್ನು ಪಡೆದಿದ್ದರು. ಇದರ ಫಲವಾಗಿ ಕರ್ಮಫಲದಲ್ಲಿ ನಿರಾಸಕ್ತಿ, ನಿತ್ಯಜೀವನದಲ್ಲಿ ಸರಳತೆ ಮತ್ತು ನಿರ್ಲಿಪ್ತತೆ ಅವರಿಗೆ ಪ್ರಾಪ್ತವಾಗಿದ್ದವು. "ಜೀವನದಲ್ಲಿ ಎಲ್ಲಾ ಕೆಲಸಗಳನ್ನೂ ಶ್ರೀರಾಮಕೃಷ್ಣರ ಕೆಲಸ ಮತ್ತು ಸೇವೆ ಎಂದು ಮಾಡಬೇಕು. ಯಾವ ಕೆಲಸವೂ ಅಮುಖ್ಯವಲ್ಲ. ಎಲ್ಲವನ್ನೂ ಗೊಣಗಾಡದೆ ಮಾಡಬೇಕು" ಎಂದು ನಮಗೆ ಹೇಳುತ್ತಿದ್ದರು. ಅವರ ಬರವಣಿಗೆ, ಪ್ರವಚನ, ಪರಸ್ಥಳಗಳಿಗೆ ಪ್ರಯಾಣ ಎಲ್ಲವೂ ಒಂದು ತಪಸ್ಸಿನಂತಿತ್ತು. ಅವರ ನಿತ್ಯದ ವಾಕಿಂಗ್ ಕೂಡ ಜಪ ಮತ್ತು ಚಿಂತನೆಯಿಂದ ಕೂಡಿತ್ತು.

ನಾನು ೧೯೭೪ರಲ್ಲಿ ಆಶ್ರಮ ಸೇರಲು ಅವರಲ್ಲಿಗೆ ಹೋದೆ. ಅವರು ಸಂತೋಷದಿಂದ ಸಮ್ಮತಿ ಸೂಚಿಸಿದರು. "ಆದರೆ, ನಿಮ್ಮ ತಾಯಿಯವರನ್ನು ಯಾರು ನೋಡಿಕೊಳ್ಳುವರು?" ಎಂದು ಕಳವಳ ವ್ಯಕ್ತಪಡಿಸಿದರು. ಧಾರ್ಮಿಕರಾದ ನಮ್ಮ ಅಣ್ಣಂದಿರು ಆ ಜವಾಬ್ದಾರಿಯನ್ನು ವಹಿಸುವರೆಂದು ತಿಳಿದ ಮೇಲೆ ಅವರಿಗೆ ಸಮಾಧಾನವಾಯಿತು. ನಾನು ಆಶ್ರಮ ಸೇರಿದುದಕ್ಕೆ ನಮ್ಮ ತಾಯಿಯವರಿಗೂ ಸಂತೋಷವಾಯಿತು. ಈ ರೀತಿಯಲ್ಲಿ, ಇತರರ ಬಗ್ಗೆ ಕಳಕಳಿ ಸ್ವಾಮೀಜಿಯವರ ಜೀವನಾದ್ಯಂತ ಕಾಣಬರುತ್ತಿತ್ತು.

ಸ್ವಾಮೀಜಿಯವರ ಬರವಣಿಗೆಗಳಲ್ಲಿ ಅನೇಕ ದೋಷಗಳು ಇರುವುದೆಂದು ಕೆಲವರು ಮೂಗರ್ಜಿಗಳನ್ನು ಬರೆದರು. ಈ ಸಂದರ್ಭದಲ್ಲಿ ನಾನು ಶ್ರೀ ಕುವೆಂಪು ಅವರ ಬಳಿ ಹೋಗಬೇಕಾಯಿತು. ಆಗ ಅವರು, "ಸ್ವಾಮಿ ಸೋಮನಾಥಾನಂದರು ಎಷ್ಟೊಂದು ಸೇವೆ ಸಲ್ಲಿಸಿದ್ದಾರೆ ಎಂಬುದು ನನಗೆ ಗೊತ್ತು. ಅವರು ಸ್ತುತಿ–ನಿಂದೆಗಳನ್ನು ಮೀರಿದವರು" ಎಂದರು. ಸ್ವಾಮೀಜಿಯವರು ಈ ಘಟನೆಯಿಂದ ಬಾಧಿತರಾಗಲೇ ಇಲ್ಲ. ಒಮ್ಮೆ ಅವರ ಕಸದಬುಟ್ಟಿಯಲ್ಲಿ ಒಂದು ಕಾಗದ ಸಿಕ್ಕಿತು. ಅದನ್ನು ಬರೆದಿದ್ದವರು ಅಮೆರಿಕ ದೇಶದಲ್ಲಿದ್ದ ಕನ್ನಡಿಗರು. ಅವರು ಸ್ವಾಮೀಜಿಯವರ 'ಗೀತಾಭಾವಧಾರೆ'ಯನ್ನು ನಿತ್ಯ ಸಾಮೂಹಿಕವಾಗಿ ಪಾರಾಯಣ ಮಾಡುತ್ತಿದ್ದು, ತಮ್ಮ ಅಪಾರ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಇಂತಹ ಎಷ್ಟೋ ಪ್ರಶಂಸಾ ಪತ್ರಗಳು ಅವರಿಗೆ ಬರುತ್ತಿದ್ದುವು. ಅವರು ಅದನ್ನು ಯಾರಿಗೂ ತೋರಿಸುತ್ತಿರಲಿಲ್ಲ. ಕಡೆಗಣ್ಣಿನಿಂದ ಸರಸರನೆ ಓದಿ ಕಸದ ಬುಟ್ಟಿಗೆ ಹಾಕಿಬಿಡುತ್ತಿದ್ದರು. ಸ್ವಾಮೀಜಿಯವರ ಕಸದಬುಟ್ಟಿ ವಿಶಾಲವಾಗಿತ್ತು. ಬೇಗನೆ ಅದು ತುಂಬುತ್ತಲೂ ಇತ್ತು.

ಕೆಲವು ವೇಳೆ ವಿಚಿತ್ರ ಘಟನೆಗಳು ನಡೆಯುತ್ತಿದ್ದುವು. ಸ್ವಾಮೀಜಿಯವರಲ್ಲಿ ಅಪಾರ ಪ್ರೀತಿ ವಿಶ್ವಾಸಗಳನ್ನು ಇಟ್ಟಿದ್ದ ಭಕ್ತರು ಅವರಿಗೆ ಪಾದಪೂಜೆ ಇತ್ಯಾದಿಗಳನ್ನು ಮಾಡಿ ಸ್ತುತಿಸಿ ಹೊಗಳುತ್ತಿದ್ದರು. ಸ್ವಾಮೀಜಿಯವರು ಇದನ್ನೆಲ್ಲ ಮೌನವಾಗಿ ಸ್ವೀಕರಿಸಿ, ನಕ್ಕು ಮರೆತುಬಿಡುತ್ತಿದ್ದರು. ತಮಗೆ ಬರುತ್ತಿದ್ದ ಕೀರ್ತಿ, ಗೌರವ, ಸನ್ಮಾನ, ಬಿರುದು, ಬಹುಮಾನ ಇವನ್ನೆಲ್ಲಾ ತಮ್ಮವೆಂದು ಭಾವಿಸದೆ, ಶ್ರೀರಾಮಕೃಷ್ಣರಿಗೆ ಧನ್ಯತೆಯಿಂದ ಅರ್ಪಿಸಿ ಎಂದಿನಂತೆ ಸರಳರಾಗಿರುತ್ತಿದ್ದರು. ಸುಮಾರು ೫೫ ವರ್ಷಗಳಿಗೂ ಹೆಚ್ಚುಕಾಲ ಮೈಸೂರು ಶ್ರೀರಾಮಕೃಷ್ಣ ಆಶ್ರಮದಲ್ಲಿದ್ದು, ಹದಿನೆಂಟು ವರ್ಷಗಳ ಕಾಲ ಅದರ ಅಧ್ಯಕ್ಷರಾಗಿದ್ದರು. ಅಧ್ಯಕ್ಷಸ್ಥಾನವನ್ನು ಸ್ವಾಮಿ ಸುರೇಶಾನಂದಜಿಯವರಿಗೆ ಬಿಟ್ಟು ಕೊಟ್ಟು ನಿವೃತ್ತರಾಗಿ ಏಳು ವರ್ಷಗಳು ಅದೇ ಆಶ್ರಮದಲ್ಲಿ ಇದ್ದರು.

ಅವರಿಗೆ ಅನೇಕರು ವಿಶೇಷ ವಸ್ತುಗಳನ್ನು ಕೊಡುಗೆಯಾಗಿ ಕಳಿಸುತ್ತಿದ್ದರು. ತಮಗಾಗಿ ಏನನ್ನೂ ಇಟ್ಟುಕೊಳ್ಳದೆ ಎಲ್ಲವನ್ನೂ ಇತರರಿಗೆ ಕೊಟ್ಟುಬಿಡುತ್ತಿದ್ದರು. ಅವರು ಹಾಕಿಕೊಳ್ಳುತ್ತಿದ್ದ ಜುಬ್ಬ ಅವರಿಗೆ ದೊಡ್ಡದಾಗಿ ಕಾಣುವುದೆಂದು ನಾವು ಹೇಳಿದಾಗ, "ಅದು ಸ್ವಾಮಿ ಶಾಂಭವಾನಂದಜಿಯವರು ಬಿಟ್ಟು ಹೋದದ್ದು. ಬಹಳ ಗಟ್ಟಿಯಾಗಿವೆ. ಅದು ಬಾಳಿಕೆ ಬರುವಷ್ಟು ಕಾಲ ನಾನು ಇರುವುದಿಲ್ಲ" ಎಂದು ನಕ್ಕುಬಿಡುತ್ತಿದ್ದರು. ಅದು ಹಾಗೆಯೇ ಆಯಿತು. ತಮಗೆ ಎಷ್ಟೇ ಕೆಲಸವಿದ್ದರೂ ಹಸನ್ಮುಖಿಗಳಾಗಿ ಇರುತ್ತಿದ್ದರು. ಹಾಸ್ಯಪ್ರವೃತ್ತಿ ಯಾವಾಗಲೂ ಮುಂದಾಗಿರುತ್ತಿತ್ತು. ಊಟದ ಸಮಯದಲ್ಲಿ ನಮ್ಮನ್ನೆಲ್ಲಾ ನಗಿಸುತ್ತಿದ್ದರು. ಹಲವು ವೇಳೆ ನಗು ತಡೆಯಲಾಗದೆ ನಾವು ಹೊಟ್ಟೆ ಹಿಡಿದುಕೊಳ್ಳಬೇಕಾಗುತ್ತಿತ್ತು.

ಸ್ವಾಮೀಜಿಯವರೊಂದಿಗೆ ನಾನು ಸುಮಾರು ೨೩ ವರ್ಷಗಳು ಇದ್ದೆ. ಬಹುಶಃ ಅವರಿಂದ ಅತ್ಯಂತ ಹೆಚ್ಚಾಗಿ

ಬೈಸಿಕೊಳ್ಳುತ್ತಿದ್ದವನೂ ನಾನೇ; ಅವರ ಪ್ರೀತಿಯ ಆಳವನ್ನು ಕಂಡವನೂ ನಾನೇ. ಕೊನೆಕೊನೆಗೆ ಒಮ್ಮೆ ಅವರು ನನ್ನೊಡನೆ, "ನೋಡು, ನಾನು ನಿನ್ನನ್ನು ಬಹಳ ಬೈದುಬಿಟ್ಟಿದ್ದೇನೆ. ಮನಸ್ಸಿಗೆ ತೆಗೆದುಕೊಳ್ಳಬೇಡ" ಎಂದು ಹೇಳಿದರು. ಆಗ ಅವರ ಕಣ್ಣಿನಲ್ಲಿ ನೀರು ಕಂಡಿತು. ನನಗೆ ಗಂಟಲು ಕಟ್ಟಿತು. ಮಾತನಾಡಲೂ ಆಗಲಿಲ್ಲ. ಅವರಿಗೆ ನಮಸ್ಕಾರ ಮಾಡಿ, ಸ್ವಲ್ಪ ಚೇತರಿಸಿಕೊಂಡು ಹೇಳಿದೆ: "ಸ್ವಾಮೀಜಿ, ತಾವು ಬಹಳ ಹಿರಿಯರು. ನಿಮ್ಮ ಮಾತುಗಳೆಲ್ಲಾ ನನಗೆ ಆಶೀರ್ವಾದ." ನನ್ನಂತಹ ಕಿರಿಯನಿಗೆ ಹಾಗೆ ಹೇಳುವಷ್ಟು ಸರಳರು ಅವರು.

ಸ್ವಾಮಿ ಸೊಮನಾಥಾನಂದಜಿಯವರು ತಪೋಧನರು, ಕರ್ಮಪಟುಗಳು. ನಿಷ್ಕಾಮ ಕರ್ಮವನ್ನು ಮಾಡಿದವರು. ಅಧ್ಯಯನ, ಲೇಖನ, ಪ್ರವಚನ, ಪ್ರಕಾಶನಗಳಿಗೆ ತಮ್ಮ ಜೀವನವನ್ನು ಸವೆಸಿ, ಅದರ ಫಲವನ್ನು ಶ್ರೀರಾಮಕೃಷ್ಣರಿಗೆ ಅರ್ಪಿಸಿ ಧನ್ಯರಾದರು. ಜೊತೆಗೆ ನನ್ನಂತಹ ವ್ಯಕ್ತಿಗಳಿಗೆ ಆಶ್ರಯ ವಿತ್ತು ಮಾರ್ಗದರ್ಶನ ಮಾಡಿ ಉದ್ಧಾರದ ಹಾದಿಯಲ್ಲಿ ನಡೆಸಿದರು. ಅಂತಹ ತುಂಬುಜೀವನ ನಡೆಸಿದವರನ್ನು ಕಣ್ಣಾರೆ ಕಂಡು ಅವರೊಂದಿಗೆ ಕಳೆದ ಕೆಲವು ವರ್ಷಗಳನ್ನು ನೆನಪು ಮಾಡಿಕೊಳ್ಳುವಾಗ ನನ್ನ ಹೃದಯವೂ ತುಂಬಿದಂತಾಗುವುದು.

**– ಸ್ವಾಮಿ ಅಮೂರ್ತಾನಂದ**

**ನಾ**ನು ಆಶ್ರಮ ಸೇರಿದುದು ೧೯೮೭ರಲ್ಲಿ. ಆದರೆ ಪೂಜ್ಯ ಸ್ವಾಮಿ ಸೋಮನಾಥಾನಂದಜಿ ಅವರನ್ನು ಮೊದಲ ಬಾರಿಗೆ ನೋಡಿದ್ದು ೧೯೭೭ರಲ್ಲಿ. ಆಗ ನಾನು ಪಿ.ಯು.ಸಿ. ಓದುತ್ತಿದ್ದೆ. ಆಶ್ರಮ ಸೇರಬೇಕೆಂದು ತೀರ್ಮಾನಿಸಿ, ಅವರನ್ನು ನೋಡಲು ಹೋದಾಗ ಅವರು, "ಮೊದಲು ನಿನ್ನ ವಿದ್ಯಾಭ್ಯಾಸ ಮುಗಿಸು. ಸಮಯ ಸಿಕ್ಕಿದಾಗ ಆಶ್ರಮಕ್ಕೆ ಬಂದು ಹೋಗುತ್ತಿರು, ಮುಂದೆ ತಿಳಿಸುವೆ" ಎಂದರು. ನಾನು ಪ್ರತಿನಿತ್ಯ ಕಾಲೇಜು ಮುಗಿಸಿ, ಆಶ್ರಮದಲ್ಲೇ ಊಟ ಮಾಡಿ, ಮಧ್ಯಾಹ್ನ ಮೂರು ಗಂಟೆಗೆ ಪುಸ್ತಕ ಪ್ರಕಟಣ ವಿಭಾಗದ ಕೆಲಸಗಳನ್ನು ಪ್ರಾರಂಭಿಸುತ್ತಿದ್ದೆ. ಆಗ ಕೆಲಸದವರು ಯಾರೂ ಇರಲಿಲ್ಲ. ಬ್ರಹ್ಮಚಾರಿಗಳು ಮತ್ತು ಸ್ವಾಮಿಗಳೇ ಎಲ್ಲಾ ಕೆಲಸಗಳನ್ನೂ ಮಾಡುತ್ತಿದ್ದರು. ಸ್ವಾಮಿ ಸೋಮನಾಥಾನಂದರೇ ಪ್ರಕಟಣ ವಿಭಾಗದ ಎಲ್ಲಾ ಕೆಲಸಗಳನ್ನೂ ನನಗೆ ಕಲಿಸಿಕೊಟ್ಟರು. ಪ್ರೆಸ್‌ನಿಂದ ಅಚ್ಚಾಗಿ ಬಂದ ಪುಸ್ತಕಗಳನ್ನು ಬೀಳದಂತೆ ಇಟ್ಟಿಗೆ ರೀತಿ ಜೋಡಿಸುವುದು, ಬೇರೆ ಕಡೆಯಿಂದ ತರಿಸಿದ ಪುಸ್ತಕಗಳನ್ನು ಎಣಿಸುವುದು, VPP ಮತ್ತು Book-Postಗೆ ಪ್ಯಾಕಿಂಗ್ ಮಾಡುವುದು, Accounting ಇತ್ಯಾದಿ. ರೈಲ್ವೇ ಮತ್ತು ಲಾರಿ ಬುಕಿಂಗ್ ಆಫೀಸ್‌ಗಳಿಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು.

ನಾನು ಅವರನ್ನು ನೋಡಿದಾಗ, ಅವರಿಗೆ ೬೭ ವರ್ಷ ವಯಸ್ಸಾಗಿತ್ತು. ಆ ಇಳಿವಯಸ್ಸಿನಲ್ಲಿ, ನನ್ನ ಜೊತೆ, ಪುಸ್ತಕಗಳನ್ನು ಪ್ಯಾಕ್ ಮಾಡುತ್ತಿದ್ದರು. ಅನೇಕ ಬಾರಿ ಪ್ರೆಸ್‌ನಿಂದ ಪುಸ್ತಕಗಳು ಬಂದಾಗ ನಾವಿಬ್ಬರೇ unload ಮಾಡುತ್ತಿದ್ದೆವು. ಅವರು ಒಳಗಡೆ ತಂದುಕೊಡುತ್ತಿದ್ದರು. ನಾನು rack ಮೇಲೆ ಕುಳಿತು ಜೋಡಿಸುತ್ತಿದ್ದೆ. ಒಮ್ಮೆ ಅವರು rack ಮೇಲೆ ಕುಳಿತು ಪುಸ್ತಕ ಜೋಡಿಸುತ್ತಿದ್ದಾಗ ಶ್ರೀರಾಮಕೃಷ್ಣ ವಿದ್ಯಾಶಾಲೆಯಿಂದ ಸ್ವಾಮಿ ಪರಾತ್ಮಾನಂದರು ಚೆಕ್‌ಗೆ ಅಧ್ಯಕ್ಷ ಸ್ವಾಮೀಜಿಯವರಿಂದ ಸಹಿ ಹಾಕಿಸಿಕೊಳ್ಳಲು ಆಶ್ರಮಕ್ಕೆ ಬಂದರು. ಆದರೆ ಅಧ್ಯಕ್ಷರು rack ಮೇಲೆ ಕುಳಿತು ಪುಸ್ತಕ ಜೋಡಿಸುತ್ತಿದ್ದರು! ಇದನ್ನು ನೋಡಿ ಪರಾತ್ಮಾನಂದ ಸ್ವಾಮಿಗಳು ಅವಾಕ್ಕಾದರು. ಸ್ವಾಮಿ ಸೋಮನಾಥಾನಂದರು, ಕುಳಿತಿದ್ದ ಕಡೆಯೇ ಚೆಕ್‌ಗೆ ಸಹಿ ಹಾಕಿ, ಪುಸ್ತಕ ಜೋಡಿಸುವುದನ್ನು ಮುಂದುವರಿಸಿದರು.

ಸ್ವಾಮಿ ಸೋಮನಾಥಾನಂದರು, ತಾವು ಆಶ್ರಮದ ಅಧ್ಯಕ್ಷರೆಂಬುದನ್ನು ಹೇಗೂ ತೋರಿಸಿಕೊಳ್ಳುತ್ತಿರಲಿಲ್ಲ. ಸಾಮಾನ್ಯರಂತೆ ಇರುತ್ತಿದ್ದರು. ತಮ್ಮ ಬಗ್ಗೆ, ತಮ್ಮ ಸಾಹಿತ್ಯದ ಬಗ್ಗೆ, ಪಾಂಡಿತ್ಯದ ಬಗ್ಗೆ, ತಮ್ಮ ಉಪನ್ಯಾಸದ ಬಗ್ಗೆ ಯಾರಿಗೂ ಹೇಳುತ್ತಿರಲಿಲ್ಲ. ಎಲೆಮರೆಯ ಕಾಯಿಯಂತೆ ಇರುತ್ತಿದ್ದರು. ಅವರು ಬಹಳ ಮೃದು ಸ್ವಭಾವದವರು; ಮಿತಭಾಷಿಗಳು. ಸಂತೋಷದಿಂದ, ಆನಂದದಿಂದ ಇರುತ್ತಿದ್ದರು. ಸದಾ ಮುಗುಳ್ನಗೆ, ಸರಳತೆ, ಸಹಜ ಪ್ರೀತಿ ಮತ್ತು ಅನುಕಂಪದಿಂದ ಕೂಡಿದ ಅಪೂರ್ವ ವ್ಯಕ್ತಿತ್ವ ಅವರದು.

ಪೂಜ್ಯ ಸ್ವಾಮೀಜಿಯವರು ಆಹಾರ-ವಿಚಾರಗಳಲ್ಲಿ ಬಹಳ ಸರಳವಾಗಿದ್ದರು. ಅವರ ಸಮಯಪ್ರಜ್ಞೆ, ಶಿಸ್ತು, ಚಾಚೂ ತಪ್ಪದೆ ನಡೆಸುತ್ತಿದ್ದ ದಿನಚರಿ, ಜಪ-ಧ್ಯಾನ-ಅಧ್ಯಯನ - ಇವೆಲ್ಲ ಅವರ ಹುಟ್ಟುಗುಣವಾಗಿ ಸಹಜವಾಗಿ ಹೋಗಿತ್ತು. ಒಮ್ಮೆ ಪ್ರಾಸಂಗಿಕವಾಗಿ ಅವರೇ ಹೇಳಿದರು. "ಇಷ್ಟು ಕೆಲಸಕಾರ್ಯಗಳ ಮಧ್ಯೆ ನಾನು ಒಂದು ದಿನವೂ ಜಪ, ಧ್ಯಾನಗಳನ್ನು ಬಿಟ್ಟಿಲ್ಲ. ಇಂದಿಗೆ (೧೯೮೭ರಲ್ಲಿ), ನಾನು ದೀಕ್ಷೆ ಪಡೆದು ೫೪ ವರ್ಷಗಳು ಆಗಿವೆ."

ಈಗ ಮೈಸೂರು ರಾಮಕೃಷ್ಣ ಆಶ್ರಮದಿಂದ ಪ್ರಕಟವಾಗುತ್ತಿರುವ ಪುಸ್ತಕಗಳಲ್ಲಿ ಬಹುಭಾಗವನ್ನು ಬರೆದಿರುವವರು ಸ್ವಾಮಿ ಸೋಮನಾಥಾನಂದರು. ಅವರ ಸ್ವಂತ ಬರಹಗಳು ಇಪ್ಪತ್ತಕ್ಕೂ ಮೀರಿವೆ. ಅನುವಾದಗಳಿಗೆ ತಮ್ಮ ಹೆಸರನ್ನು ಹಾಕುತ್ತಲೇ ಇರಲಿಲ್ಲ. ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳನ್ನು ಮೊದಲ ಬಾರಿಗೆ ಕನ್ನಡಕ್ಕೆ ಅನುವಾದಿಸಿ, ಸ್ವಾಮಿ ವಿವೇಕಾನಂದರ ಜನ್ಮ ಶತಮಾನೋತ್ಸವ ವರ್ಷದಲ್ಲಿ (೧೯೬೩) ಹತ್ತು ಸಂಪುಟಗಳ 'ಕೃತಿಶ್ರೇಣಿ'ಯನ್ನು ಹೊರತಂದರು. ಅನುವಾದ ಮುಗಿದಂತೆ ಈ ಕೃತಿಗಳನ್ನು ಬಿಡಿ ಗ್ರಂಥಗಳನ್ನಾಗಿ ಪ್ರಕಟಿಸಿದ್ದರು. ಇವಲ್ಲದೆ, ಸುಮಾರು ಹದಿನೈದು ಆಧ್ಯಾತ್ಮಿಕ ಗ್ರಂಥಗಳನ್ನು ಕನ್ನಡಕ್ಕೆ ಅನುವಾದ ಮಾಡಿರುವರು.

ಈಗಿನಂತೆ ಕನ್ನಡದಲ್ಲಿ ರಾಮಕೃಷ್ಣ - ವಿವೇಕಾನಂದ-ಶಾರದಾದೇವಿಯವರನ್ನು ಕುರಿತು ಉಪನ್ಯಾಸ ಮಾಡುವ ಸ್ವಾಮಿಗಳು ಆಗ ಹೆಚ್ಚು ಸಂಖ್ಯೆಯಲ್ಲಿ ಇರಲಿಲ್ಲ. ಕರ್ನಾಟಕದ ಎಲ್ಲೆಡೆಗೆ ಪೂಜ್ಯ ಸ್ವಾಮಿ ಸೋಮನಾಥಾನಂದಜಿಯವರೇ ಉಪನ್ಯಾಸ ಮಾಡಲು ಹೋಗುತ್ತಿದ್ದರು. ಮಂಡ್ಯ, ಮದ್ದೂರು, ಹಾಸನ, ಅರಸೀಕೆರೆ, ಅಜ್ಜಂಪುರ, ಕೊಳ್ಳೇಗಾಲ, ಬಿಜಾಪುರ, ಬೆಂಗಳೂರು, ಬೆಳಗಾಂ, ದಾವಣಗೆರೆ, ಬಳ್ಳಾರಿ ಮುಂತಾದ ಊರುಗಳಿಗೆ ಸತತವಾಗಿ ಅನೇಕ ವರ್ಷಗಳು ಒಬ್ಬರೇ ಪ್ರವಚನಕ್ಕೆ

ಹೋಗುತ್ತಿದ್ದರು. ಹೋಗುವಾಗ ಜೊತೆಯಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಊರಿನಿಂದ ಊರಿಗೆ ಹೋಗುವಾಗ, ರೈಲು ನಿಲ್ದಾಣದಲ್ಲಿ ಮಲಗಿದ್ದು ಬೆಳಗ್ಗೆ ಅಲ್ಲಿಯೇ ಸ್ನಾನ ಮಾಡಿ, ಮುಂದಿನ ಊರಿಗೆ ಪ್ರಯಾಣ ಮಾಡುತ್ತಿದ್ದರು. ಅನೇಕವೇಳೆ, ರೈಲು ನಿಲ್ದಾಣದಲ್ಲಿಯೇ ಪುಸ್ತಕಗಳನ್ನು ಹರಡಿ, ಮಾರಾಟ ಮಾಡುತ್ತಿದ್ದರಂತೆ. ಜೀವನವಿಡೀ ರಾಮಕೃಷ್ಣ–ವಿವೇಕಾನಂದ ಸಾಹಿತ್ಯ ಸೇವೆಯನ್ನು ಏಕಪ್ರಕಾರವಾಗಿ ಮಾಡಿ, ಅದಕ್ಕೆ ತಮ್ಮ ಜೀವನವನ್ನು ಮೀಸಲಾಗಿಟ್ಟರು.

ಸ್ವಾಮಿ ರಂಗನಾಥಾನಂದಜಿಯವರು ಮೈಸೂರಿಗೆ ಬಂದಿದ್ದಾಗ ಅವರು ಸ್ವಾಮಿ ಸೋಮನಾಥಾನಂದರನ್ನು ಕುರಿತು ಈ ರೀತಿ ಹೇಳಿದರು: "ಶಾಮಣ್ಣ ಮಹರಾಜ್ (ಸ್ವಾಮಿ ಸೋಮನಾಥಾನಂದಜಿ) ರಾಮಕೃಷ್ಣ ಮಹಾಸಂಘಕ್ಕೆ, ಅದರಲ್ಲೂ ಕರ್ನಾಟಕಕ್ಕೆ ಯಾವ ರೀತಿ ಸಾಹಿತ್ಯ ಸೇವೆ, ಭಾವಪ್ರಚಾರ ಮಾಡಿದ್ದಾರೆ ಎಂದು ಯಾರಿಗೂ ಗೊತ್ತಿಲ್ಲ. ಅದನ್ನು ಕಣ್ಣಾರೆ ನೋಡದಿದ್ದರೆ ನಂಬುದಕ್ಕೆ ಆಗುವುದಿಲ್ಲ."

ನಾನು ಆಶ್ರಮ ಸೇರುವುದಕ್ಕೆ ಸ್ವಾಮಿ ಅಮೂರ್ತಾನಂದರು ಬಹಳ ಸಹಾಯಮಾಡಿದರು. ಸ್ವಾಮಿ ಸೋಮನಾಥಾನಂದರು. "ನೀನು ಮೈಸೂರಿನಲ್ಲೇ ಸೇರು. ನಾನು ನಿಮ್ಮ ತಾಯಿಯವರಿಗೆ ಹೇಳುತ್ತೇನೆ. ಮನೆಯಲ್ಲಿ ಹಣದ ಕೊರತೆ ಇದ್ದರೆ ತಿಳಿಸು. ಅದಕ್ಕೆ ವ್ಯವಸ್ಥೆ ಮಾಡುತ್ತೇನೆ. ಆಶ್ರಮ ಸೇರಲು ನಿನಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತೇನೆ" ಎಂದರು. ಒಮ್ಮೆ ಹೇಳಿದರು, "ಯಾವ ಕಾರಣದಿಂದಲೂ ಒಂದು ದಿನವೂ ಜಪ–ಧ್ಯಾನ ಬಿಡಬೇಡ. ಕೆಲಸದ ಮಧ್ಯೆ ಸಮಯ ಮಾಡಿಕೊಂಡು ಅವುಗಳನ್ನು ಮಾಡು. ಜಪ–ಧ್ಯಾನಗಳನ್ನು ಶ್ರದ್ಧೆಯಿಂದ ಮಾಡಿದರೆ ಕರ್ಮವನ್ನು ಚೆನ್ನಾಗಿ ಮಾಡಬಹುದು. ಮತ್ತೆ ಚೆನ್ನಾಗಿ ಶ್ರದ್ಧೆಯಿಂದ ಕರ್ಮ ಮಾಡಿದರೆ ಜಪ ಧ್ಯಾನ ಚೆನ್ನಾಗಿ ಇರುತ್ತದೆ."

ಸ್ವಾಮೀಜಿಯವರು ನಿವೃತ್ತರಾದ ಮೇಲೆ, ತಾವೇ ಪ್ರಾರಂಭಿಸಿ ಬೆಳೆಸಿದ ಪುಸ್ತಕ ಪ್ರಕಾಶನದ ಕಡೆ ಮರೆತೂ ಗಮನ ಕೊಡುತ್ತಿರಲಿಲ್ಲ. ಒಮ್ಮೆ Press ನವರು ಪುನರ್ಮುದ್ರಣವಾದ, ಸ್ವಾಮೀಜಿಯವರ ಪುಸ್ತಕವೊಂದನ್ನು ತೆಗೆದುಕೊಂಡು ಹೋಗಿ ಅವರಿಗೆ ತೋರಿಸಿದರು. ಅದಕ್ಕೆ ಅವರು, "ಈಗ ನಾನಲ್ಲ in-charge, ಸುರೇಶಾನಂದರು. ಅವರಿಗೆ ಅದನ್ನು ತೋರಿಸಿ" ಎಂದು ಹೇಳಿ ತಮ್ಮ ಓದಿನಲ್ಲಿ ಮಗ್ನರಾದರು.

ನಿರ್ಮಲ ಮನಸ್ಸಿನ ಸ್ವಾಮೀಜಿಯವರು ನಿರ್ಲಿಪ್ತರೂ ಆಗಿದ್ದರು. ಅವರ ಕಾರ್ಯೋನ್ಮುಖತೆ ಮತ್ತು ನಿರ್ಲಿಪ್ತತೆಯನ್ನು ನೆನೆದರೆ, ಮನಸ್ಸು ಧ್ಯಾನಸ್ಥಿತಿಗೆ ಏರುವುದು. ನನ್ನಂತಹ ಎಷ್ಟೋ ಸಸಿಗಳನ್ನು ಆಧ್ಯಾತ್ಮಿಕ ಭೂಮಿಯಲ್ಲಿ ಅವರು ಮೌನವಾಗಿ ನೆಟ್ಟರು. ಅವರ ಶಕ್ತಿಯನ್ನು ಹೀರುತ್ತಾ, ಅವು ನಿಂತಲ್ಲಿ ಬೆಳೆಯುತ್ತಿವೆ.

– ಸ್ವಾಮಿ ಪುಣ್ಯವ್ರತಾನಂದ

## ಸೋಮನಾಥಾನಂದಜಿ ಅವರ ಎರಡು ಮೇರುಕೃತಿಗಳು

ಸ್ವಾಮಿ ಸೋಮನಾಥಾನಂದರ ಎರಡು ಪುಸ್ತಕಗಳು ತುಂಬ ಜನಪ್ರಿಯವಾಗಿವೆ. ಒಂದು, **'ಉಪನಿಷತ್ ಭಾವಧಾರೆ'**. ಮತ್ತೊಂದು, **'ಗೀತಾ ಭಾವಧಾರೆ'**. ಎರಡೂ ಗಾತ್ರದಲ್ಲಿ ದೊಡ್ಡ ಕೃತಿಗಳು. ಮೊದಲನೆಯದು ಡೆಮ್ಮಿ ಸೈಜಿನಲ್ಲಿ ೭೦೮ ಪುಟಗಳನ್ನೂ, ಎರಡನೆಯದು ಅದೇ ಸೈಜಿನಲ್ಲಿ ೬೪೬ ಪುಟಗಳನ್ನೂ ಉಳ್ಳದ್ದು. ಎರಡೂ ಈಗಾಗಲೇ ಹತ್ತು ಮುದ್ರಣಗಳನ್ನು ಕಂಡಿವೆ. ಕನ್ನಡ ಪುಸ್ತಕಗಳು ಮಾರಾಟವಾಗುವುದು ಆಮೆಗತಿಯಲ್ಲಿ ಎಂಬುದನ್ನು ಗಮನಿಸಿದರೆ, ಈ ಪುಸ್ತಕಗಳು ಇಷ್ಟು ಮುದ್ರಣಗಳನ್ನು ಕಂಡಿರುವುದು, ಅವುಗಳು ಜನರಿಗೆ ತುಂಬ ಬೇಕಾದವು ಎಂಬುದು ಸ್ಪಷ್ಟವಾಗಿದೆ.

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದಲ್ಲಿಯೂ, ಇತರ ಅನೇಕ ರಾಮಕೃಷ್ಣ ಮಠದ ಕೇಂದ್ರಗಳಂತೆ ಅನೇಕ ವರ್ಷಗಳಿಂದ ಭಾನುವಾರಗಳ ಸಂಜೆ ಪ್ರವಚನಗಳು ನಡೆಯುತ್ತಲೇ ಬಂದಿವೆ. ಸ್ವಾಮಿ ಸೋಮನಾಥಾನಂದಜಿ ಅವರು ಅನೇಕ ವರ್ಷಗಳ ಕಾಲ ಹೀಗೆ ಪ್ರವಚನಗಳನ್ನು ಅಲ್ಲಿ ನೀಡಿದವರು. ಅವರದು ಮನಮೋಹಕ ಶೈಲಿ; ಗಹನವಾದ ವಿಷಯಗಳನ್ನು ಸಾಮಾನ್ಯರಿಗೂ ತಿಳಿಯುವಂತೆ ಹೇಳುವ ರೀತಿ ಅವರಿಗೆ ಕರಗತವಾಗಿತ್ತು. ಜನರಿಗೆ ಕಠಿಣವಾದ ತತ್ತ್ವಗಳು ಅರ್ಥವಾಗುವುದು, ಅದನ್ನು ವಿವರಿಸುವಾಗ ದಿನನಿತ್ಯದ ಉಪಮೆಗಳನ್ನು ಕೊಡುವುದರಿಂದ, ಸರಳವಾದ ಮಾತುಗಳಲ್ಲಿ ಅವುಗಳನ್ನು ಹೇಳುವುದರಿಂದ. ಮೇಲಿನ ತಮ್ಮ ಎರಡೂ ಕೃತಿಗಳಲ್ಲಿ ಸ್ವಾಮಿ ಸೋಮನಾಥಾನಂದಜಿ ಅವರು ಹಾಗೆ ಮಾಡಿದ್ದಾರೆ. ಜೊತೆಗೆ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಅನುಭೂತಿವಾಣಿಯ ಬೆಳಕನ್ನು ಭಗವದ್ಗೀತೆ ಉಪನಿಷತ್ತುಗಳ ಮೇಲೆ ಚೆಲ್ಲಿ, ಅವೆಲ್ಲ ಬರಿಯ ಮಾತಲ್ಲ, ಇಂಥ ಋಷಿಗಳ ಹೃದಯದ ಅಗ್ನಿಕುಂಡದಿಂದ ಚಿಮ್ಮಿ ಬಂದ ಬೆಳಕಿನುಂಡೆಗಳು ಎಂಬ ನಂಬಿಕೆ ಓದುಗರಿಗೆ ಬರುವಂತೆ ಮಾಡಿರುವುದು ಸ್ವಾಮಿ ಸೋಮನಾಥಾನಂದಜಿ ಅವರ ಹಿರಿಮೆ.

– ಡಾ. ಪ್ರಭುಶಂಕರ ( *ಅಮೃತವರ್ಷ ಸ್ಮರಣಸಂಚಿಕೆ*, ಪುಟ ೮೪–೮೫)